ಸಾಕ್ಷಿಗೆ ದಿನಾಂಕ 07-02-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 3

ಮುಂದುವರೆದ ಪಾಟೀ ಸವಾಲು. ಆರೋಪಿತರ ಪರ ಶ್ರೀ ಟಿ ಎಸ್ ಪಿ ವಕೀಲರಿಂದಃ-

ಪಿರ್ಯಾದನ್ನು ನಮ್ಮ ರೈಟರ್ ಬೆರಳಚ್ಚು ಮಾಡಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಪಿರ್ಯಾದಿ ಬೆರಳಚ್ಚು ಮಾಡಲು ಸುಮಾರು ಅರ್ಧ ಗಂಟೆ ಸಮಯ ಹಿಡಿಯಿತು. ಸದರಿ ಪಿರ್ಯಾದಿಯನ್ನು ಪೋಲೀಸ್ ಇಲಾಖಾ ಕಂಪ್ಯೂಟರಿನಲ್ಲಿ ಮಾಡಲಾಯಿತು. ನಾನು ಪಿರ್ಯಾದಿಯನ್ನು ಹೊರಗಡೆ ಟೈಪ್ ಮಾಡಿಸಿ ಕೊಟ್ಟಿಲ್ಲ.

ಈ ಹಿಂದೆ ಪರಿಶೀಲನೆ ಮಾಡಿದಾಗ ಹೆಚ್ ಬಿ ಹಳ್ಳಿ ವ್ಯಾಪ್ತಿಯಲ್ಲಿ ಈ ಹಿಂದೆ ಈ ರೀತಿ ಯಾವುದೇ ತರಹದ ಘಟನೆ ನಡೆದಿರುವುದಿಲ್ಲ. ಈ ಹಿಂದೆ ಗಂಗಪ್ಪ ಇವರ ನ್ಯಾಯಬೆಲೆ ಅಂಗಡಿಯಲ್ಲಿ ಈ ತರಹದ ಯಾವುದೇ ಘಟನೆ ನಡೆದಿಲ್ಲ. ನ್ಯಾಯಾಲಯದ ಮುಂದಿರುವ ಪಿರ್ಯಾದಿಯಲ್ಲಿ ಆಹಾರ ಪಡಿತರಕ್ಕೆ ಸಂಬಂಧಿಸಿದ ಯಾವುದೇ ವಿಚಾರ ಪ್ರಸ್ತಾಪವಾಗಿಲ್ಲವೆಂದರೆ ಸರಿ. ಆ ದಿನ ನಾವು ಅತೀವೃಷ್ಟಿ ಪರಿಶೀಲನೆಗಾಗಿ ತಂಬ್ರಹಳ್ಳಿ, ಕಿತ್ನೂರು ಮತ್ತು ಮುತ್ಕೂರು ಗ್ರಾಮಕ್ಕೆ ಹೋಗಿರುತ್ತೇವೆ. ಈ ಊರನ್ನು ಹೊರತುಪಡಿಸಿ ನೀವು ಬೇರೆ ಊರಿಗೆ ಹೋಗಿಲ್ಲವೆಂದರೆ ಸಾಕ್ಷಿಯು ನಾವು ಅಲ್ಲಿಂದ ಹಂಪಸಾಗರ-3 ಗ್ರಾಮಕ್ಕೆ ಹೋಗಿರುತ್ತೇವೆನ್ನುತ್ತಾರೆ. ಅತೀವೃಷ್ಟಿ ಪರಿಶೀಲನೆಗಾಗಿ ನಮಗೆ ತಹಶೀಲ್ದಾರ್ ರವರು ಪೋನ್ ಮಾಡಿ ಕರೆದಿದ್ದರು. ತಹಶೀಲ್ದಾರ್ ರವರು ತಮ್ಮ ಮೊಬೈಲಿನಿಂದ ಕರೆ ಮಾಡಿದ್ರು ಅದರ ನಂಬರ್ ನನಗೆ ಹೇಳಲು ಬರುವುದಿಲ್ಲ ಆಗ ಸಮಯ ಬೆಳಿಗ್ಗೆ 11.30 ಗಂಟೆಯಾಗಿರಬಹುದು. ಆ ಸಮಯದಲ್ಲಿ ನಾನು ನಮ್ಮ ಇಲಾಖೆಗೆ ಸಂಬಂಧಿಸಿದ ಗೋಡೌನಿನಲ್ಲಿ ಅಕ್ಕಿಯನ್ನು ಲಿಫ್ಟ್ ಮಾಡಿಸುತ್ತಿದ್ದೆ. ಸದರಿ ಅಶೀವೃಷ್ಟಿ ಪರಿಶೀಲನೆಗೆ ಹೋದಾಗ ಎಷ್ಟು ಇಲಾಖೆಯ ಸಿಬ್ಬಂದಿಗಳು ಇದ್ದರು ಎಂದರೆ ಸಾಕ್ಷಿಯು 10 ಇಲಾಖೆಯ ಸಿಬ್ಬಂದಿಗಳು ಇದ್ದರೆನ್ನುತ್ತಾರೆ. ಅವರೆಂದರೆ ಎಸಿ ಹೊಸಪೇಟೆ, ತಹಶೀಲ್ದಾರ್ ಹೆಚ್ ಬಿ ಹಳ್ಳಿ, ಇ ಓ ಹೆಚ್ ಬಿ ಹಳ್ಳಿ, ಎ ಇ ಇ ಹೆಚ್ ಬಿ ಹಳ್ಳಿ, ಬಿ ಇ ಓ ಹೆಚ್ ಬಿ ಹಳ್ಳಿ, ಕೃಷಿ ಇಲಾಖೆಯ ಅಧಿಕಾರಿ, ತೋಟಗಾರಿಕೆ ಇಲಾಖೆ ಅಧಿಕಾರಿ, ತಂಬ್ರಹಳ್ಳಿ ಆರ್ ಐ ಇದ್ದರು. ಪೋಲೀಸ್ ಇಲಾಖೆಯವರು ಯಾರೂ ಇರಲಿಲ್ಲ. ಆ ರೀತಿ ಹೋದಾಗ ಅಹಿತಕರ ಘಟನೆ ನಡೆಯಬಾರದು ಅಂತಾ ಪೋಲೀಸ್ ರಕ್ಷಣೆ ಪಡೆಯುತ್ತಾರೆಂದರೆ ಸಾಕ್ಷಿಯು ಆ ಬಗ್ಗೆ ಮುನ್ಸೂಚನೆ ಇದ್ದರೆ ಪಡೆಯುತ್ತಾರೆನ್ನುತ್ತಾರೆ. ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ಭಾಗದ ವಿ ಎ, ಉಪ ತಹಶೀಲ್ದಾರ್ ಮತ್ತು ಆರ್ ಐ ಸಹಾ ಇದ್ದರು. ಆ ಸಮಯದಲ್ಲಿ ಪರಿಶೀಲನೆಗಾಗಿ ಹೋಗುವಾಗ ಪೋಲೀಸ್

ಇಲಾಖೆಗೆ ನಾವು ತಿಳಿಸಿರಲಿಲ್ಲ. ನಾನು ಆ ದಿನ ಬೈಕಿನಲ್ಲಿ ಹೋಗಿರುತ್ತೇನೆ. ಆ ದಿನ ಸುಮಾರು 8-10 ಸರ್ಕಾರಿ ವಾಹನಗಳು ಮತ್ತು ಖಾಸಗೀ ವಾಹನಗಳು ಎಷ್ಟು ಇದ್ದವೆಂದು ನನಗೆ ನೆನಪಿಲ್ಲ. ಯಾವ ಇಲಾಖೆಗೆ ಆ ವಾಹನಗಳು ಸಂಬಂಧಿಸಿದ್ದವು ಎನ್ನುವುದು ನನಗೆ ಮಾಹಿತಿ ಇಲ್ಲ.

ಆ ದಿನ ಪಂಚನಾಮೆಗೆ ಒಟ್ಟಾರೆ 4 ಜನ ಸಹಿ ಮಾಡಿರುತ್ತಾರೆ. ಪಂಚನಾಮೆಗೆ ನೀವೇ ಹೋದ್ರಾ ಅಥವಾ ನಿಮಗೆ ಯಾರಾದ್ರು ಕರೆದ್ರಾ ಎಂದರೆ ಸಾಕ್ಷಿಯು ನಾನು ಪಿ ಎಸ್ ಐ ಜೊತೆ ಹೋಗಿರುತ್ತೇನೆನ್ನುತ್ತಾರೆ, ಪಂಚನಾಮೆಗೆ ನಾನು ಮರುದಿನ 11 ಗಂಟೆ ಸಮಯಕ್ಕೆ ಹೋಗಿದ್ದೇನೆ. ಘಟನಾ ಸ್ಥಳದ ಚಕ್ಕುಬಂದಿ ಉಃ ಹಂಪಸಾಗರ-ಹೆಚ್ ಬಿ ಹಳ್ಳಿ ರಸ್ತೆ, ದಃಸಮುದಾಯ ಭವನ, ಪೂ-ಪಃ ಖಾಲಿ ಜಾಗ ಇರುತ್ತದೆ. ನ್ಯಾಯಾಬೆಲೆ ಅಂಗಡಿಗೆ ಬಿಳಿ ಬಣ್ಣ ಇತ್ತು ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಅಂಗಡಿಯ ಬಣ್ಣವನ್ನು ಹೊರತುಪಡಿಸಿ ಅಂಗಡಿಯ ರೂಪದ ಇತರೆ ವಿಚಾರ ನನಗೆ ಗೊತ್ತಿಲ್ಲ. ಪಿರ್ಯಾದಿಯನ್ನು ನಾನು ಕೊಟ್ಟಿಲ್ಲ ಪೋಲೀಸರೇ ಅದನ್ನು ತಯಾರಿಸಿರುತ್ತಾರೆಂದರೆ ಸರಿಯಲ್ಲ. ಮೇಲಾಧಾರಿತ ಕೃತ್ಯ ಸ್ಥಳಕ್ಕೆ ನಾನು ಹೋಗಿದ್ದೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-1 ರಿಂದ 5 ದಾಖಲೆಗಳು ಸುಳ್ಳಿನಿಂದ ಕೂಡಿರುತ್ತವೆಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ನಾವು ಹೇಳುವ ಹಾಗೆ ಆರೋಪಿತರು ಯಾವುದೇ ಕೃತ್ಯವನ್ನು ಎಸಗಿಲ್ಲವೆಂದರೆ ಸರಿಯಲ್ಲ. ನಾನುಮೇಲಾಧಿಕಾರಿಗಳ ಮಾತನ್ನು ಕೇಳಿ ಆರೋಪಿತರ ವಿರುದ್ದ ಅಂಕಿ ಸಂಖ್ಯೆಗಳ ಸಲುವಾಗಿ ಸುಳ್ಳು ಪ್ರಕರಣವನ್ನು ದಾಖಲುಪಡಿಸಿರುತ್ತೇನೆಂದರೆ ಸರಿಯಲ್ಲ. ಆರೋಪಿತರು ನನ್ನ ಮೇಲೆ ಮತ್ತು ನಮ್ಮ ಯಾವುದೇ ಅಧಿಕಾರಿಗಳ ಮೇಲೆ ಯಾವುದೇ ರೀತಿಯಿಂದ ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲವೆಂದರೆ ಸರಿಯಲ್ಲ ಮತ್ತು ಆರೋಪಿತರು ಯಾವುದೇ ರಿತೀಯಿಂದ ಬೈದಿಲ್ಲವೆಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ